ಪಾಠ–5 ಜನವರಿ 25–31

# ಗರ್ವದಿಂದ ದೀನತೆಗೆ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ದಾನಿ 4:1–33, ಜ್ಞಾನೋಕ್ತಿ 14:31 ಮತ್ತು 2 ಅರಸುಗಳು 20:2–5, ಯೋನ 3:10, ದಾನಿ 4:34–37, ಫಿಲಿ 2:1–11.

**ಸ್ಮರಣ ವಾಕ್ಯ : "ಆತನ ಮಹತ್ತುಗಳು ಎಷ್ಟೋ ಅತಿಶಯ! ಆತನ ಅದ್ಭುತಗಳು ಎಷ್ಟೋ ವಿಶೇಷ! ಆತನ ರಾಜ್ಯವು ಶಾಶ್ವತ ರಾಜ್ಯ. ಆತನ ಆಳ್ವಿಕೆಯು ತಲತಲಾಂತರಕ್ಕೂ ನಿಲ್ಲುವುದು (ದಾನಿ 4:3).**

ಗರ್ವವು ಮೊದಲ ಪಾಪವಾಗಿದೆ. ಪರಲೋಕದ ಆಸ್ಥಾನದಲ್ಲಿ ಒಬ್ಬ ದೇವದೂತನಾಗಿದ್ದ ಲೂಸಿಫರನಲ್ಲಿ ಇದು ಹೊರಪಟ್ಟಿತು. ದೇವರು ಯೆಹೆಜ್ಕೇಲನ ಮುಖಾಂತರ ಹೀಗೆ ಹೇಳುತ್ತಾನೆ. "ನೀನು ನಿನ್ನ ಸೊಬಗಿನ ನಿಮಿತ್ತ ಉಬ್ಬಿದ ಮನಸ್ಸುಳ್ಳವನಾಗಿ ನಿನ್ನ ಮೆರೆತದಿಂದ ನಿನ್ನ ಬುದ್ಧಿಯನ್ನು ಹಳು ಮಾಡಿಕೊಂಡಿ. ಇದರಿಂದ ನಾನು ನಿನ್ನನ್ನು ನೆಲಕ್ಕೆ ದೊಬ್ಬಿ ನೀನು ಅರಸರಿಗೆ ನೋಟವಾಗುವಂತೆ ಅವರ ಕಣ್ಣಮುಂದೆ ಹಾಕಿದೆನು (ಯೆಹೆ 28:17).

ಗರ್ವವು ಲೂಸಿಫರನನ್ನು ಪತನದತ್ತ ನಡೆಸಿತ್ತು. ಹಾಗಾಗಿ ಆತನು ಜನಗಳಲ್ಲಿ ಗರ್ವವು ಹುಟ್ಟುವಂತೆ ಮಾಡುತ್ತಾನೆ ಮತ್ತು ಜನರು ನಾಶವಾಗುವಂತೆ ದೇವರಿಗೆ ವಿರುದ್ಧವಾದ ಮಾರ್ಗದಲ್ಲಿ ನಡೆಸುತ್ತಾನೆ. ನಾವೆಲ್ಲರೂ ಪಾಪದಲ್ಲಿ ಬಿದ್ದುಹೋದ ನರಮನುಷ್ಯರು, ನಮ್ಮ ಅಸ್ತಿತ್ವಕ್ಕೆ ನಾವು ದೇವರನ್ನು ಆತುಕೊಂಡಿದ್ದೇವೆ. ನಮಗೆ

ಕೊಡಲ್ಪಟ್ಟಿರುವ ಉಡುಗೊರೆಗಳು ಅವುಗಳಿಂದ ನಾವು ಮಾಡಿರುವ ಸಾಧನೆಗಳು ದೇವರಿಂದ ಮಾತ್ರ ಬರುತ್ತದೆ. ಆದುದರಿಂದ ನಾವು ಹೇಗೆ ಹೊಗಳಿಕೊಳ್ಳಲು ಸಾಧ್ಯ! ಅಹಂಕಾರ ಪಡುವುದು ಅಥವಾ ಉದ್ಧಟನಾಗಿರಲು ಸಾಧ್ಯ. ನಿಜವಾಗಿ ಹೇಳುವುದಾದರೆ ನಾವು ಮಾಡುವುದರಲ್ಲೆಲ್ಲಾ ವಿನಮ್ರರಾಗಿರಬೇಕು ತಾನೆ?

ದೀನತೆಯ ಪ್ರಾಮುಖ್ಯತೆಯ ಬಗ್ಗೆ ನೆಬೂಕದ್ನೆಚ್ಚರನು ಬಹಳ ಕಾಲದ ನಂತರ ಅರಿತುಕೊಂಡನು. ಧಗಧಗನೆ ಉರಿಯುವ ಆವಿಗೆಯಲ್ಲಿ ನಾಲ್ಕನೇ ವ್ಯಕ್ತಿಯು ಕಾಣಿಸಿಕೊಂಡಾಗ್ಯೂ ತನ್ನ ಜೀವನದ ರೀತಿಯನ್ನು ಬದಲಾಯಿಸಿಕೊಳ್ಳಲಿಲ್ಲ. ದೇವರು ನೆಬೂಕದ್ನೆಚ್ಚರನ ರಾಜ್ಯವನ್ನು ಕಿತ್ತುಕೊಂಡು ಅವನನ್ನು ಮೃಗಗಳ ಮಧ್ಯೆದಲ್ಲಿ ವಾಸಿಸುವಂತೆ ಮಾಡಿದ ಮೇಲೆ ರಾಜನಿಗೆ ತನ್ನ ನಿಜ ಪರಿಸ್ಥಿತಿಯ ಬಗ್ಗೆ ಅರಿವಾಯ್ತು.

ಫೆಬ್ರವರಿ 1ನೇ ತಾರೀಖಿನ ಸಬ್ಬತ್ತಿಗೆ ಈ ಪಾಠವನ್ನು ಸಿದ್ಧಪಡಿಸಿಕೊಳ್ಳಿರಿ.

**ಭಾನುವಾರ** **ಜನವರಿ 26**

## ಬ್ಯಾಬಿಲೋನು ಮಹಾನ್ ಪಟ್ಟಣವಲ್ಲವೆ?

ಓದಿರಿ : ದಾನಿ 4:1–33 ರಾಜನಿಗೆ ಏನಾಗುತ್ತದೆ ಮತ್ತು ಯಾಕೆ?

ದೇವರು ನೆಬೂಕದ್ನೆಚ್ಚರನಿಗೆ ಎರಡನೇ ಕನಸನ್ನು ಕೊಟ್ಟನು, ರಾಜನು ಕನಸನ್ನು ಮರೆಯಲ್ಲಿ ಬ್ಯಾಬಿಲೋನಿನ ಸಕಲ ವಿದ್ವಾಂಸರು ಆ ಕನಸಿನ ಅರ್ಥವನ್ನು ಹೇಳಲಾರದೆ ಹೋದದರಿಂದ ರಾಜನು ಕನಸಿನ ಅರ್ಥವನ್ನು ತಿಳಿದುಕೊಳ್ಳುವುದಕ್ಕಾಗಿ ದಾನಿಯೇಲನನ್ನು ಕರೆಸಿದನು. ಕನಸಿನಲ್ಲಿ ರಾಜನು ಆಕಾಶದೆತ್ತರಕ್ಕೆ ಬೆಳೆದ ಮರವನ್ನು ಕಾಣುತ್ತಾನೆ. ಪರಲೋಕದಲ್ಲಿದ್ದವನು "ಈ ವೃಕ್ಷವನ್ನು ಕಡಿಯಿರಿ, ಕೊಂಬೆಗಳನ್ನು ಕತ್ತರಿಸಿರಿ" ಎಂದು ಆಜ್ಞಾಪಿಸುತ್ತಾನೆ. ಮರದ ಬುಡಮಾತ್ರ ಉಳಿಯುತ್ತದೆ ಆಕಾಶದ ಇಬ್ಬನಿಯು ಆ ಬುಡವನ್ನು ತೋಯಿಸುತ್ತಿತ್ತು. ಆದರೆ ನೆಬೂಕದ್ನೆಚ್ಚರನನ್ನು ಕಳವಳಪಡಿಸಿದುದು ಕನಸಿನ ಒಂದು ಭಾಗ. "ಮನುಷ್ಯರ ಹೃದಯವು ಹೋಗಿ ಮೃಗದ ಹೃದಯವು ಬರಲಿ. ಹೀಗೆ ಅದಕ್ಕೆ ಏಳು ವರುಷ ಕಳೆಯಲಿ" ಎಂಬುದು (ದಾನಿ 4:16). ಕನಸಿನ ಅರ್ಥ ಬಹಳ ಗಂಭೀರವಾಗಿರುವುದನ್ನು ದಾನಿಯೇಲನು ಗುರುತಿಸಿದನು,

ಕನಸಿನ ಫಲ ರಾಜನ ಹಗೆಗಳಿಗೆ ಆಗಲಿ, ಅದರ ಅರ್ಥವು ರಾಜನ ವಿರೋಧಿಗಳ ಅನುಭವಕ್ಕೆ ಬರಲಿ ಎಂದು ದಾನಿಯೇಲನು ವಿನೀತವಾಗಿ ಆಶಿಸಿದನು. ಕನಸಿನ ಅರ್ಥವು (ಸಂದೇಶವು) ದಾನಿಯೇಲನಿಗೆ ತಿಳಿದಾಗ ಆತನು ನಂಬಿಗಸ್ತನಾಗಿ ಕನಸು ರಾಜನಿಗೆ ಅನ್ಯಾಯವಾಗುತ್ತದೆ ಎಂದು ಹೇಳಿದನು.

ಸತ್ಯವೇದದಲ್ಲಿ ವೃಕ್ಷವು ಸಾಮಾನ್ಯವಾಗಿ ರಾಜರುಗಳಿಗೆ, ಜನಾಂಗಗಳಿಗೆ, ಸಾಮ್ರಾಜ್ಯಗಳಿಗೆ ಸಂಕೇತವಾಗಿ ಉಪಯೋಗಿಸಲ್ಪಟ್ಟಿದೆ (ಯೆಹೆ 17:31, ಹೋಶೇಯ 14, ಜೆಕರ್ಯ 11:1,2, ಲೂಕ 23:31). ಆದುದರಿಂದ ದೊಡ್ಡ ಮರವು ಅಹಂಕಾರಿಯಾದ ರಾಜನನ್ನು ತಕ್ಕ ರೀತಿಯಲ್ಲಿ ಪ್ರತಿನಿಧಿಸುತ್ತದೆ. ದೇವರು ನೆಬೂಕದ್ನೆಚ್ಚರನಿಗೆ ರಾಜ್ಯ, ಅಧಿಕಾರವೆಲ್ಲವನ್ನು ಕೊಟ್ಟನು. ಆದಾಗ್ಯೂ ತಾನು ಹೊಂದುಕೊಂಡಿರುವುದಿಲ್ಲ ದೇವರಿಂದ ಬಂದಿದೆಯೆಂಬುದನ್ನು ಅರಿತುಕೊಳ್ಳಲು ವಿಫಲನಾದನು.

ದಾನಿಯೇಲ 4:30ರ ಮೇಲೆ ಗಮನಹರಿಸಿರಿ. ನೆಬೂಕದ್ನೆಚ್ಚರನು ದೇವರು ಕೊಟ್ಟ ಎಚ್ಚರಿಕೆಯನ್ನು ಇನ್ನೂ ಗ್ರಹಿಸಿಕೊಳ್ಳಲಿಲ್ಲವೆಂಬುದನ್ನು ಅವನು ಆಡಿದ ಯಾವ ಮಾತು ತೋರಿಸಿಕೊಡುತ್ತದೆ?

ಗರ್ವವು ಹೇಗೆ ಅಪಾಯಕರವೆಂದರೆ ನಾವು ಎಲ್ಲದಕ್ಕೂ ದೇವರ ಮೇಲೆ ಆತುಕೊಂಡಿದ್ದೇವೆ ಎಂಬುದನ್ನು ಅದು ಮರೆಸಿಬಿಡುತ್ತದೆ. ಒಮ್ಮೆ ಅದನ್ನು ಮರೆತರೆ ನಾವು ಅಪಾಯಕರವಾದ ಆಧ್ಯಾತ್ಮಿಕ ನೆಲದ ಮೇಲೆ ಇರುತ್ತೇವೆ.

ನಿಮ್ಮ ಜೀವಿತದಲ್ಲಿ ನೀವು ಏನೇನು ಸಾಧಿಸಿದ್ದೀರಿ? ನೀವು ಅವುಗಳ ವಿಷಯದಲ್ಲಿ ಹೆಮ್ಮೆ ಪಡದೆ ಗರ್ವಪಡುವುದು ಸಾಧ್ಯವೆ? ಹಾಗಾದರೆ ಅದು ಹೇಗೆ ಸಾಧ್ಯ?

**ಸೋಮವಾರ** **ಜನವರಿ 27**

## ಪ್ರವಾದಿಯಿಂದ ಎಚ್ಚರಿಸಲ್ಪಡುವುದು

ದಾನಿಯೇಲ 4:27 ದಾನಿಯೇಲನು ರಾಜನಿಗೆ ಮುಂದೆ ಏನಾಗುತ್ತದೆಂಬುದರ ಬಗ್ಗೆ ಎಚ್ಚರಿಕೆ ಕೊಡುವುದರೊಂದಿಗೆ ರಾಜನು ಏನು ಮಾಡಬೇಕೆಂದು ಬುದ್ಧಿವಾದ ಕೊಡುತ್ತಾನೆ? (ಜ್ಞಾ 14:31ನ್ನು ನೋಡಿರಿ).

ದಾನಿಯೇಲನು ಕನಸಿನ ಅರ್ಥವನ್ನು ಹೇಳಿಕೊಡುವುದು ಮಾತ್ರವಲ್ಲದೆ ರಾಜನು ಈ ಪರಿಸ್ಥಿತಿಯಿಂದ ಹೊರಬರುವುದು ಹೇಗೆಂತಲೂ ಹೇಳಿದನು: "ಆದಕಾರಣ, ಅರಸೇ, ಈ ನನ್ನ ಬುದ್ಧಿವಾದವು ನಿನಗೆ ಒಪ್ಪಿಗೆಯಾಗಲಿ. ನೀನು ಧರ್ಮವನ್ನು ಆಚರಿಸಿ ನಿನ್ನ ಪಾಪಗಳನ್ನು ನಾಶಗೊಳಿಸಿ ಬಡವರಿಗೆ ಕರುಣೆಯನ್ನು ತೋರಿಸಿ ನಿನ್ನ ಅಪರಾಧಗಳನ್ನು ಧ್ವಂಸ ಮಾಡು. ಇದರಿಂದ ನಿನ್ನ ನೆಮ್ಮದಿಯ ಕಾಲ ಹೆಚ್ಚಾದೀತು ಎಂದು ಅರಿಕೆ ಮಾಡಿದನು" (ದಾನಿ 4:27).

ನೆಬೂಕದ್ನೆಚ್ಚರನು ಬ್ಯಾಬಿಲೋನಿನಲ್ಲಿ ದೊಡ್ಡಕಟ್ಟಡ ಕಟ್ಟುವ ಕೆಲಸವನ್ನು ಕೈಗೊಂಡನು. ನೀರ್ಗಾಲುವೆಗಳ ವ್ಯವಸ್ಥೆ, ನೂರಾರು ದೇವಾಲಯಗಳು ಮತ್ತು ಇತರೆ ಕಟ್ಟಡಗಳ ಯೋಜನೆಗಳು ಮಾತ್ರವಲ್ಲದೆ ತೂಗಾಡುವ ತೋಟವನ್ನು ನಿರ್ಮಿಸಿದ್ದನು. ಪುರಾತನ ಕಾಲದ ಪ್ರಪಂಚದ ಅದ್ಭುತಗಳಲ್ಲಿ ಇದೂ ಒಂದಾಗಿತ್ತು. ಅಂತಹ ದೊಡ್ಡ ಕಟ್ಟಡದ ಕೆಲಸಗಳನ್ನು ಮಾಡಿಸುವುದಕ್ಕೆ ರಾಜನು ಗುಲಾಮರನ್ನು ಶೋಷಣೆ ಮಾಡಿದ್ದನು, ಬಡವರನ್ನು ಅಲಕ್ಷಿಸಿದ್ದನು. ರಾಜ್ಯದ ಸಂಪತ್ತು ರಾಜನ ಮತ್ತು ಆತನ ಪರಿವಾರದವರ ಸುಖಭೋಗಗಳನ್ನು ತಣಿಸಲು ಬಳಸಲ್ಪಡುತ್ತಿತ್ತು. ನೆಬೂಕದ್ನೆಚ್ಚರನ ಗರ್ವವು ಅವನನ್ನು ದೇವರಿಗೆ ಮನ್ನಣೆ ನೀಡದಂತೆ ತಡೆಯಿತು. ತತ್ಪರಿಣಾಮವಾಗಿ ಕೊರತೆಯಲ್ಲಿರುವ ಬಡವರ ಕಷ್ಟಗಳಿಗೆ ಸ್ಪಂದಿಸುವದನ್ನು ಮರೆಯುವಂತೆ ಮಾಡಿತು. ಬಡವರನ್ನು ವಿಶೇಷವಾಗಿ ಲಕ್ಷಿಸಬೇಕೆಂದು ದೇವರು ಹೇಳಿರುವುದರಿಂದ ದಾನಿಯೇಲನು ರಾಜನಿಗೆ ಇತರ ಪಾಪಗಳನ್ನು ಹೇಳುವಾಗ ಬಡವರನ್ನು ನಿರ್ಲಕ್ಷಿಸುವುದು ಪಾಪವೆಂದು ಹೇಳಿದುದಕ್ಕೆ ಆಶ್ಚರ್ಯಪಡಬೇಕಾಗಿಲ್ಲ.

ನೆಬೂಕದ್ನೆಚ್ಚರನಿಗೆ ಕೊಟ್ಟ ಸಂದೇಶವು ಯಾವುದೇ ರೀತಿಯಲ್ಲಿ ಹೊಸದಾಗಿರಲಿಲ್ಲ. ಪ್ರವಾದಿಗಳು ಬಹಳಷ್ಟು ಸಲ ಬಡವರನ್ನು ತುಳಿಯಬಾರದೆಂದು ದೇವಜನರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಇಸ್ರಾಯೇಲ್ಯ ರಾಜನು ಗಡೀಪಾರಾಗುವಂತೆ ಮಾಡಿದ ಪಾಪಗಳಲ್ಲಿ ಮುಖ್ಯವಾದುದು ಕೊರತೆಯಲ್ಲಿರುವವರನ್ನು ಅಲಕ್ಷಿಸುದಾಗಿದೆ. ಕನಿಕರವೆಂಬುದು ಬಡವರ ಮೇಲೆ ಕ್ರೈಸ್ತೀಯ ಪ್ರೀತಿಯನ್ನು ಹೆಚ್ಚಾಗಿ ಪ್ರಕಟಿಸುವುದಾಗಿದೆ. ಇದಕ್ಕೆ ಪ್ರತಿಯಾಗಿ

ಶೋಷಣೆ ಮತ್ತು ಬಡವರ ಮೇಲಿನ ತಾತ್ಸಾರ ದೇವರ ಮೇಲೆ ಆಕ್ರಮ ಮಾಡುವುದನ್ನು ಒಳಗೊಂಡಿದೆ. ಯಜಮಾನನೆಂಬುದಾಗಿ (ಒಡೆಯ) ಗುರುತಿಸುತ್ತೇವೆ, ಹಾಗೆಂದರೆ ನಾವು ಮಾಲೀಕರಲ್ಲ ದೇವರ ಆಸ್ತಿಗೆ ಕೇವಲ ಪಾರುಪತ್ಯಗಾರರು ನಾವು ನಮಗಿರುವುಗಳಿಂದ ಇತರರನ್ನು ಸೇವಿಸುವಾಗ ದೇವರ ಒಡೆತನವನ್ನು ಗುರುತಿಸಿ ಆತನಿಗೆ ಗೌರವ ಸಲ್ಲಿಸುತ್ತೇವೆ. ಅಂತಿಮವಾಗಿ ಭೌತಿಕ ಆಸ್ತಿಪಾಸ್ತಿಗಳ ಕಾರ್ಯನಿರ್ವಹಣೆ ಮತ್ತು ಮೌಲ್ಯಗಳನ್ನು ದೇವರ ಒಡೆತನವು ನಿರ್ಧರಿಸುತ್ತದೆ. ಇಲ್ಲಿ ತಾನೆ ನೆಬೂಕದ್ನೆಚ್ಚರನು ವಿಫಲನಾದನು ಮತ್ತು ನಮ್ಮ ಸಾಧನೆಗಳಲ್ಲಿ ದೇವರ ಸಾರ್ವಭೌಮತ್ವವನ್ನು ಗುರುತಿಸದೆ ಹೋದರೆ ನಾವೂ ಕೂಡ ವಿಫಲರಾಗುವ ಅಪಾಯ ಸಾಧ್ಯತೆಯಲ್ಲಿರುತ್ತೇವೆ.

**ಮಂಗಳವಾರ** **ಜನವರಿ 28**

## ಮಹೋನ್ನತನು ಆಳುತ್ತಾನೆ

ದಾನಿಯೇಲನು ನೆಬೂಕದ್ನೆಚ್ಚರನಿಗೆ ಪಶ್ಚಾತ್ತಾಪಪಟ್ಟು ದೇವರ ಕ್ಷಮಾಪಣೆ ಹೊಂದಿಕೊಳ್ಳಲು ಹೇಳಿದಾಗ್ಯೂ ಅವನ ಅತಿಯಾದ ಗರ್ವವು ಪರಲೋಕದ ತೀರ್ಪು ಅವನ ಮೇಲೆ ಕಾರ್ಯನಿರ್ವಹಿಸುವಂತೆ ಆಯಿತು (ದಾನಿ 4:28–33). ರಾಜನು ಬಾಬೆಲಿನ ಅರಮನೆಯಲ್ಲಿ ತಿರುಗಾಡುತ್ತಾ ತಾನು ಏನನ್ನು ಸಾಧಿಸಿರುವನೋ ಅದಕ್ಕೆ ತನ್ನ ಸಾಮರ್ಥ್ಯವೇ ಕಾರಣವೆಂದು ಹೆಚ್ಚಿಸಿಕೊಂಡ ಕೂಡಲೇ ಅವನ ಮನಸ್ಥಿತಿಯು ಅರಮನೆಯಿಂದ ಹೊರಹಾಕುವ ಪರಿಸ್ಥಿತಿಗೆ ಬಂತು. ಅಂತಹ ಪರಿಸ್ಥಿತಿಯುಲ್ಲಿ ರೋಗಿಯು ಮೃಗದ ಹಾಗೆ ವರ್ತಿಸತೊಡಗುತ್ತಾನೆ, ಆಧುನಿಕ ಕಾಲದಲ್ಲಿ ಈ ರೋಗವನ್ನು ಪ್ರಭೇದ ಡಿಸ್ಫೋರಿಯ ಎಂದು ಕರೆಯುತ್ತಾರೆ. ಮನುಷ್ಯನಿಗೆ ತನಗಿರುವ ದೇಹವು ಬೇರೊಂದು ಪ್ರಭೇದದಾಗಿದೆಯೆಂಬ ಭಾವನೆ ಉಂಟಾಗಿ ಪ್ರಾಣಿಯಂತೆ ಇರಲು ಬಯಸುವುದು ಈ ರೋಗದ ಲಕ್ಷಣವಾಗಿದೆ.

ಓದಿರಿ : 2 ಅರಸುಗಳು 20:2–5; ಯೋನ 3:10 ಮತ್ತು ಯೆರೆಮೀಯ 18:7,8 ರಾಜನು ತನಗೆ ಬಂದ ಶಿಕ್ಷೆಯಿಂದ ಪಾರಾಗುವ ಅವಕಾಶ ಹೊಂದಿರುವುದರ ಬಗ್ಗೆ ಈ ವಚನಗಳು ನಮಗೆ ಏನನ್ನು ಹೇಳುತ್ತವೆ?

ನೆಬೂಕದ್ನೆಚ್ಚರನು ದೌರ್ಭಾಗ್ಯಕರವಾಗಿ ಕಠಿಣವಾರ್ಗದ ಬಗ್ಗೆ ಕಲಿಯಬೇಕಾಗಿತ್ತು. ರಾಜಾಧಿಕಾರದ ಬಲವು ನೆಬೂಕದ್ನೆಚ್ಚರನಿಗಿದ್ದಾಗ ದೇವರೊಂದಿಗಿನ ಸಂಬಂಧವನ್ನು ಪ್ರತಿಬಿಂಬಿಸುವ ಸಾಮರ್ಥ್ಯವಿಲ್ಲ. ಹಾಗಾಗಿ ರಾಜನನ್ನು ಅಧಿಕಾರದಿಂದ ದೂಡಿ ತನ್ನ ಮೇಲೆ ಆತುಕೊಳ್ಳುವ ಸ್ಥಿತಿಗೆ ಬರುವಂತೆ, ದೇವರು ಅವನನ್ನು ಕಾಡಿನ ಮೃಗಗಳೊಂದಿಗೆ ವಾಸಿಸುವಂತೆ ಕಳುಹಿಸಿದನು. 'ಪರಲೋಕವು ಆಳುತ್ತದೆ' ಎಂಬ ಪಾಠವನ್ನು ಉದ್ಧಟನಾದ ರಾಜನಿಗೆ ದೇವರು ಅಂತಿಮವಾಗಿ ಕಲಿಸಬೇಕಾಗಿತ್ತು (ದಾನಿ 4:26). ದೇವರ ಯೋಜನೆಯಲ್ಲಿ ರಾಜನ ಮೇಲೆ ಆದ ನ್ಯಾಯತೀರ್ಪಿಗೆ ದೊಡ್ಡ ಉದ್ದೇಶವಿತ್ತು. ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿ ಅದರ ಆಳ್ವಿಕೆಯನ್ನು ತನಗೆ ಬೇಕಾದವರಿಗೆ ಒಪ್ಪಿಸಿ ಕನಿಷ್ಠರನ್ನೂ ಅದರ ಮೇಲೆ ನೇಮಿಸುತ್ತಾನೆಂಬುದು ಜೀವಂತರಿಗೆ ತಿಳಿದುಬರಬೇಕೆಂಬುದೇ ಈ ತೀರ್ಮಾನವಾಯ್ತು" (ದಾನಿ 4:17).

ಇದನ್ನು ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ನೆಬೂಕದ್ನೆಚ್ಚರನಿಗೆ ಮಾಡಿದ ಶಿಸ್ತುಕ್ರಮ ನಮ್ಮೆಲ್ಲರಿಗೂ ಸಹಾ ಪಾಠವಾಗಿರಬೇಕೆಂದು ದೇವರು ಬಯಸಿದನು. ನಾವು ಜೀವಿಸುತ್ತಿರುವವರ ಗುಂಪಿಗೆ ಸೇರಿದವರಾಗಿರುವುದರಿಂದ ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ಆಳುತ್ತಾನೆಂಬುದು ಮುಖ್ಯವಾದ ಪಾಠವನ್ನು ಕಲಿಯುವುದಕ್ಕೆ ಹೆಚ್ಚಾದ ಗಮನವನ್ನರಿಸಬೇಕು.

ಪರಾತ್ಪರನು ಆಳುತ್ತಾನೆಂದು ಕಲಿಯುವುದು ನಮಗೆ ಮುಖ್ಯವಾದ ಪಾಠವಾಗಿದೆ ಏಕೆ? ನಾವು ಯಾರ ಮೇಲೆ ಅಧಿಕಾರವನ್ನು ಹೊಂದಿದ್ದೇವೆಯೋ ಅವರ ಮೇಲೆ ಯಾವ ಪರಿಣಾಮ ಬೀರುತ್ತದೆ?

**ಬುಧವಾರ** **ಜನವರಿ 29**

## ಪರಲೋಕದೆಡೆಗೆ ಕಣ್ಣುಗಳನ್ನೆತ್ತಿ ನೋಡುವುದು

ಓದಿರಿ : ದಾನಿಯೇಲ 4:34–37. ಹೇಗೆ ಮತ್ತು ಏಕೆ ರಾಜನಿಗೋಸ್ಕರ ವಿಷಯಗಳು ಬದಲಾಗುತ್ತವೆ?

ನೆಬೂಕದ್ನೆಚ್ಚರನು ಒಂದು ವಿಚಿತ್ರವಾದ ಖಾಯಿಲೆಯಿಂದ ನರಳುವಂತೆ ದೇವರು ಅನುಮತಿಸಿದನು. ಆದರೆ ಅಂತಿಮವಾಗಿ ಅವನ ಮಾನಸಿಕ ಸ್ವಸ್ಥತೆಯನ್ನು

ಹಿಂದಿರುಗಿಸುವುದಕ್ಕೆ ದೇವರು ಸಿದ್ಧವಾಗಿದ್ದನು. ಪ್ರವಾದಿಯು ಹೇಳಿದಂತೆ ಏಳು ವರ್ಷಗಳು ಕಳೆದ ಬಳಿಕ ರೋಗಪೀಡಿತನಾದ ರಾಜನು ಆಕಾಶದ ಕಡೆಗೆ ಕಣ್ಣೆತ್ತಿ ನೋಡಿದನು (ದಾನಿ 4:34).

"ಏಳು ವರ್ಷಗಳ ಪರ್ಯಂತರ ನೆಬೂಕದ್ನೆಚ್ಚರನು ತನ್ನ ಪ್ರಜೆಗಳಿಗೆಲ್ಲಾ ಆಶ್ಚರ್ಯವಾಗಿದ್ದನು. ಯಾಕೆಂದರೆ ರಾಜನು ಏಳು ವರ್ಷಗಳ ಅವಧಿಯಲ್ಲಿ ಲೋಕಕ್ಕೆಲ್ಲಾ ತನ್ನನ್ನು ತಾನು ತಗ್ಗಿಸಿಕೊಂಡ ಮೇಲೆ ಮತ್ತೆ ಅವನ ವಿವೇಚನಶಕ್ತಿಯು ಹಿಂದಿರುಗಿ ಬಂದಿತು, ದೀನತೆಯಿಂದ ಆತನು ಪರಲೋಕ ದೇವರನ್ನು ಕಣ್ಣೆತ್ತಿ ನೋಡಿದನು, ತನಗೆ ದಂಡನೆ ನೀಡಿದ ದೈವಕರಗಳನ್ನು ಗುರುತಿಸಿದನು. ತನ್ನ ತಪ್ಪಿತಸ್ಥ ಮನೋಭಾವವನ್ನು, ತನ್ನನ್ನು ಪುನರುಜ್ಜೀವನ ಮಾಡಿದ ದೇವರ ಮಹಾಕರುಣೆಯನ್ನು ಸಾರ್ವಜನಿಕವಾಗಿ ಘೋಷಣೆ ಮಾಡಿದನು". ಎಲೆನ್ ಜಿ ವೈಟಮ್ಮನವರ ಪ್ರಾಫೆಟ್ಸ್ ಅಂಡ್ ಕಿಂಗ್ಸ್ ಪುಸ್ತಕದಲ್ಲಿ 520ನೇ ಪುಟ.

ನಾವು ನಮ್ಮ ದೃಷ್ಟಿಯನ್ನು ಪರಲೋಕದ ಕಡೆಗೆ ಹರಿಸಿದಾಗ ಖಂಡಿತವಾಗಿ ಮಹಾಪರಿವರ್ತನೆಯಾಗುತ್ತದೆ. ತನಗೆ ವಿವೇಚನಾಶಕ್ತಿಯು ಹಿಂದಿರುಗಿ ಬಂದ ಕೂಡಲೆ ರಾಜನು ಪಾಠ ಕಲಿತನೆಂಬುದಕ್ಕೆ ಪುರಾವೆ ನೀಡಿದನು. ಆದರೆ ಈ ಕಥೆಯು ದೇವರ ಕರುಣೆಯ ಬಗ್ಗೆ ಹೇಳುವಷ್ಟು ಮಟ್ಟಿಗೆ ನೆಬೂಕದ್ನೆಚ್ಚರನ ಬಗ್ಗೆ ಹೇಳುವುದಿಲ್ಲ. ಇಸ್ರಾಯೇಲ್ಯರ ದೇವರನ್ನು ತನ್ನ ಜೀವನದ ಕರ್ತನೆಂದು ಅಂಗೀಕಾರ ಮಾಡಿಕೊಳ್ಳುವ ಮೂರು ಅವಕಾಶಗಳನ್ನು ತಪ್ಪಿಸಿಕೊಂಡನು. ಅಂತಹ ಸಂದರ್ಭಗಳು ನಾಲ್ಕುಮಂದಿ ಇಬ್ರಿಯ ಸೆರೆಯಾಳುಗಳ ಅಸಮಾನ್ಯ ಜ್ಞಾನವನ್ನು ಗುರುತಿಸಿದಾಗ (ದಾನಿಯೇಲ 1ನೇ ಅಧ್ಯಾಯ), ದಾನಿಯೇಲನು ಅವನ ಕನಸನ್ನು ತಿಳಿಸಿದಾಗ (ದಾನಿಯೇಲ 2ನೇ ಅಧ್ಯಾಯ), ಮೂವರು ಇಬ್ರಿಯ ಮನುಷ್ಯರು ಧಗಧಗನೆ ಉರಿಯುವ ಆವಿಗೆಯಿಂದ ಪಾರಾದಾಗ (ದಾನಿಯೇಲ 3ನೇ ಅಧ್ಯಾಯ), ಇಷ್ಟೆಲ್ಲಾ ಆದಮೇಲೂ ಇವರು ಪಾರಾದುದನ್ನು ನೋಡಿದ ಮೇಲೂ ರಾಜನು ತನ್ನನ್ನು ತಾನು ತಗ್ಗಿಸಿಕೊಳ್ಳಲಿಲ್ಲವೆಂದಮೇಲೆ ಮತ್ಯಾವುದಕ್ಕೆ ತಗ್ಗುತ್ತಾನೆ? ಆಳುವವರ ಹಠಮಾರಿತನದಲ್ಲಿಯೂ ದೇವರು ನಾಲ್ಕನೆ ಅವಕಾಶವನ್ನು ರಾಜನಿಗೆ ಕೊಟ್ಟನು. ಅಂತಿಮವಾಗಿ ರಾಜನ ಹೃದಯವನ್ನು ಗೆದ್ದನು, ತಿರುಗಿ ಅವನನ್ನು ಸಿಂಹಾಸನದ ಮೇಲೆ ಸ್ಥಾಪಿಸಿದನು

(ದಾನಿಯೇಲ 4ನೇ ಅಧ್ಯಾಯ). ನೆಬೂಕದ್ನೆಚ್ಚರನ ಉದಾಹರಣೆಯಲ್ಲಿ ನೋಡಿದಂತೆ ದೇವರು ನಮಗೆ ಒಂದರಮೇಲೆ ಮತ್ತೊಂದು ಅವಕಾಶವನ್ನು ಕೊಟ್ಟು ತನ್ನ ಜೊತೆ ಸರಿಯಾದ ಸಂಬಂಧವನ್ನು ಮರುಸ್ಥಾಪಿಸಿಕೊಳ್ಳುತ್ತಾನೆ. ಕೆಲವು ಶತಮಾನಗಳ ಬಳಿಕ ಪೌಲನು ಬರೆಯುವಂತೆ "ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಆತನ ಚಿತ್ತವಾಗಿದೆ" (1ನೇ ತಿಮೊಥೆ 2:4). ಆ ಸತ್ಯದ ಬಲವಾದ ಉದಾಹರಣೆಯನ್ನು ಈ ಕಥೆಯಲ್ಲಿ ನೋಡುತ್ತೇವೆ.

ನೀವು ಯಾವ ಯಾವ ರೀತಿಯಲ್ಲಿ ದೇವರಿಂದ ದೀನರಾಗಿದ್ದೀರಿ? ಅನುಭವದಿಂದ ನೀವು ಏನನ್ನು ಕಲಿತಿರಿ? ಮತ್ತೆ ಪಾಠ ಕಲಿಯಬೇಕಾದ ಸಂದರ್ಭವನ್ನು ತಡೆಯಲು ಯಾವ ಬದಲಾವಣೆಯು ನಿಮಗೆ ಅಗತ್ಯವಾಗಿದೆ?

**ಗುರುವಾರ** **ಜನವರಿ 30**

## ದೀನತೆ ಮತ್ತು ಕೃತಜ್ಞತೆ

ಪಶ್ಚಾತ್ತಾಪ ಪಟ್ಟ ರಾಜನು "ಭೂನಿವಾಸಿಗಳೆಲ್ಲರೂ ಆತನ ದೃಷ್ಟಿಯಲ್ಲಿ ಏನೂ ಅಲ್ಲದಂತಿದ್ದಾರೆ" ಎಂದು ಹೇಳುತ್ತಾನೆ (ದಾನಿ 4:35). ಈ ಸಂದರ್ಭದಲ್ಲಿ ಮುಖ್ಯವಾದ ಯಾವ ವಿಷಯವನ್ನು ಕುರಿತು ಹೇಳುತ್ತಾನೆ?

ನೆಬೂಕದ್ನೆಚ್ಚರನು ನಿಜವಾಗಿಯೂ ಸತ್ಯದೇವರನ್ನು ಅಂಗೀಕರಿಸುದುದು ನಮಗೆ ಹೇಗೆ ಗೊತ್ತಾಗುತ್ತದೆ? ದಾನಿಯೇಲ 4ನೇ ಅಧ್ಯಾಯದಲ್ಲಿ ಅಡಕವಾಗಿರುವ ಪತ್ರದ ಲೇಖಕ ರಾಜನೇ ಆಗಿರುವ ಸಂಗತಿಯಿಂದ ನಾವು ಒಂದು ಪ್ರಧಾನವಾದ ಪುರಾವೆಯನ್ನು ಕಂಡುಕೊಳ್ಳುತ್ತೇವೆ. ಈ ಅಧ್ಯಾಯದ ಬಹುಭಾಗವು ರಾಜನು ತನ್ನ ವಿಶಾಲವಾದ ರಾಜ್ಯಕ್ಕೆ ಹಂಚುವುದಕ್ಕೆಂದು ಬರೆದ ಪತ್ರದ ಪ್ರತಿಯಾಗಿದೆ. ಈ ಪತ್ರದಲ್ಲಿ ರಾಜನು ತನ್ನ ಗರ್ವ ಮತ್ತು ಹುಚ್ಚುತನದ ಬಗ್ಗೆ ತನ್ನ ಜೀವನದಲ್ಲಿ ದೇವರು ಹೇಗೆ ಪ್ರವೇಶಿಸಿದನೆಂಬುದನ್ನೂ ದೀನತೆಯಿಂದ ಗುರುತಿಸಿದ್ದಾನೆ. ಪುರಾತನ ರಾಜರುಗಳು ತಮ್ಮ ಬಗ್ಗೆ ಅವಮಾನಕರವಾದದ್ದನ್ನು ಅಪರೂಪವಾಗಿ ಬರೆದಿದ್ದಾರೆ. ರಾಜರ ಎಲ್ಲಾ ದಾಖಲೆಗಳಲ್ಲಿ ಬಹುಮಟ್ಟಿಗೆ ರಾಜನನ್ನು ವೈಭವೀಕರಿಸಿರುವುದನ್ನು ಕಾಣುತ್ತೇವೆ. ಇಂತಹ ದಾಖಲೆಯೊಂದರಲ್ಲಿ ರಾಜನು

ತನ್ನ ಗರ್ವದ ಮತ್ತು ಮೃಗೀಯ ವರ್ತನೆಯನ್ನು ಒಪ್ಪಿಕೊಳ್ಳುವುದು ಆತನ ನೈಜ ಪರಿವರ್ತನೆಯನ್ನು ಸೂಚಿಸುತ್ತದೆ. ಇದರ ಜೊತೆಗೆ ರಾಜನು ತನ್ನ ಅನುಭವವನ್ನು ಸಾರ್ವಭೌಮತ್ವವನ್ನು ಒಪ್ಪಿಕೊಂಡು ಧರ್ಮಪ್ರವರ್ತಕನಂತೆ ಕಾರ್ಯವೆಸಗುತ್ತಾನೆ. ನಿಜವಾದ ದೇವರಿಂದ ತನಗಾದ ಅನುಭವವನ್ನು ಮತ್ತು ತಾನು ಕಲಿತ ಪಾಠವನ್ನು ಹೆಚ್ಚು ಕಾಲ ಇಟ್ಟುಕೊಳ್ಳಲಾಗಲಿಲ್ಲ. ರಾಜನ ಪ್ರಾರ್ಥನೆ ಮತ್ತು ಕೊಂಡಾಟಗಳಲ್ಲಿ ನಾವು ಅವನ ಅನುಭವದ ವಾಸ್ತವತೆಯನ್ನು ಹೊರಪಡುವುದನ್ನು ಕಾಣುತ್ತೇವೆ (ದಾನಿ 4:34–37).

ರಾಜನಿಗೆ ಈವಾಗ ಭಿನ್ನವಾದ ಮೌಲ್ಯಗಳಿದ್ದವು ಮತ್ತು ಮಾನವನ ಸಾಮರ್ಥ್ಯದ ಪರಿಮಿತಿಯನ್ನು ಗುರುತಿಸಬಲ್ಲವನಾಗಿದ್ದನು. ಕೃತಜ್ಞತೆಯನ್ನು ಸೂಚಿಸುವ ಗಾಢವಾದ ಪ್ರಾರ್ಥನೆಯಲ್ಲಿ ರಾಜನು ದಾನಿಯೇಲನ ದೇವರ ಶಕ್ತಿಯನ್ನು ಕೊಂಡಾಡಿದನು "ಭೂನಿವಾಸಿಗಳೆಲ್ಲರೂ ಆತನ ದೃಷ್ಟಿಯಲ್ಲಿ ಏನೂ ಅಲ್ಲದಂತಿದ್ದಾರೆ" (ದಾನಿ 4:35) ಎಂಬುದನ್ನು ಒಪ್ಪಿಕೊಂಡನು. ಹಾಗೆ ಹೇಳುವುದಾದರೆ ಮನುಷ್ಯನಲ್ಲಿ ತನ್ನನ್ನು ತಾನು ಹೊಗಳಿಕೊಳ್ಳುವಂಥದ್ದು ಏನೂ ಇರುವುದಿಲ್ಲವೆಂದು ಅರ್ಥವಾಗುತ್ತದೆ. ದಾನಿಯೇಲನ ಪುಸ್ತಕದಲ್ಲಿರುವ ನೆಬೂಕದ್ನೆಚ್ಚರನ ಮಿನುಗುನೋಟದ ರಾಜನು ದೀನತೆಯಿಂದ, ಕೃತಜ್ಞತೆಯಿಂದ ಸ್ತೋತ್ರವನ್ನರ್ಪಿಸಿ ಗರ್ವದ ವಿಷಯದಲ್ಲಿ ಎಚ್ಚರಿಕೆ ಕೊಡುತ್ತಾನೆ.

ನಾವು ಎಷ್ಟೇ ಗರ್ವಿಗಳು, ಪಾಪಿಗಳಾಗಿದ್ದಾಗ್ಯೂ ದೇವರು ಇಂದು ಜೀವಿತಗಳನ್ನು ಬದಲಿಸುವ ಕೆಲಸವನ್ನು ಮುಂದುವರೆಸಿದ್ದಾನೆ. ತನಗೆ ಎದುರು ಬೀಳುವ ಪಾಪಿಗಳನ್ನು ತನ್ನ ಮಕ್ಕಳನ್ನಾಗಿಸಿಕೊಳ್ಳುವ ಕರುಣೆ ಮತ್ತು ಸಾಮರ್ಥ್ಯ ಪರಲೋಕದ ದೇವರಿಗಿದೆ.

ಫಿಲಿಪ್ಪಿ 2:1–11 ವಚನಗಳನ್ನು ಓದಿರಿ. ನಮ್ಮ ಜೀವಿತಗಳಲ್ಲಿ ಗರ್ವವನ್ನು ನಾಶಪಡಿಸುವಂಥದ್ದು ಇಲ್ಲಿ ಏನೆಂದು ಕಾಣುತ್ತೇವೆ?

**ಶುಕ್ರವಾರ** **ಜನವರಿ 31**

**ಹೆಚ್ಚಿನ ಚಿಂತನೆ :** ಒಂದು ಕಾಲದಲ್ಲಿ ಗರ್ವ ತುಂಬಿದ್ದ ಚಕ್ರವರ್ತಿಯು ಈವಾಗ ದೀನತೆಯುಳ್ಳ ದೇವರ ಮಗುವಾಗಿದ್ದಾನೆ; ದಬ್ಬಾಳಿಕೆಯಿಂದ ದರ್ಪದಿಂದ

ಆಳುತ್ತಿದ್ದವನು ಜ್ಞಾನಿಯೂ, ಕನಿಕರಪಡುವವನೂ ಆಗಿದ್ದಾನೆ. ದೇವರಿಗೆ ಎದುರು ಬಿದ್ದ ದೂಷಣೆ ಮಾಡಿದವನು ಈವಾಗ ಪರಾತ್ಪರನ ಶಕ್ತಿಯನ್ನು ಒಪ್ಪಿಕೊಂಡು ಆಸಕ್ತಿಯಿಂದ ತನ್ನ ಪ್ರಜೆಗಳ ಸಂತೋಷವನ್ನು ಬಯಸುವವನಾಗಿ ಅವರು ದೇವರಿಗೆ ಭಯಪಟ್ಟು ನಡೆದುಕೊಳ್ಳುವಂತೆ ಪ್ರೋತ್ಸಾಹಿಸುತ್ತಾನೆ. ಯಾವಾತನು ರಾಜಾಧಿರಾಜನೂ ಕರ್ತರ ಕರ್ತನೂ ಆಗಿರುವನೋ ಅವನ ಖಂಡನೆಯಿಂದ ನೆಬೂಕದ್ನೆಚ್ಚರನು, ಆಳ್ವಿಕೆ ನಡೆಸುವವರೆಲ್ಲರೂ ಕಲಿಯಬೇಕಾದ ಪಾಠವನ್ನು ಕಲಿತನು. ನಿಜವಾದ ಒಳ್ಳೆಯತನದಲ್ಲಿ ನಿಜವಾದ ಮಹತ್ವವಿದೆ ಎಂದು ಅರಿತುಕೊಂಡನು. ಆತನು ಜೀವಿಸುವ ದೇವರಾದ ಯೆಹೋವನನ್ನು ಒಪ್ಪಿಕೊಂಡು "ನೆಬೂಕದ್ನೆಚ್ಚರನಾದ ನಾನು ಪರಲೋಕರಾಜನನ್ನು ಹೊಗಳಿ ಕೊಂಡಾಡಿ ಕೀರ್ತಿಸುತ್ತೇನೆ; ಆತನ ಕಾರ್ಯಗಳೆಲ್ಲಾ ಸತ್ಯ, ಆತನ ಮಾರ್ಗಗಳೆಲ್ಲಾ ನ್ಯಾಯ; ಸೊಕ್ಕಿನಿಂದ ನಡೆಯುವವರನ್ನು ತಗ್ಗಿಸಬಲ್ಲನು.

ಲೋಕದ ಮಹಾಸಾಮ್ರಾಜ್ಯವೂ ಸಹ ದೇವರನ್ನು ಸ್ತುತಿಸಬೇಕೆಂಬ ಆತನ ಉದ್ದೇಶವು ಈವಾಗ ನೆರವೇರಿತು. ಈ ಸಾರ್ವಜನಿಕ ಘೋಷಣೆಯಲ್ಲಿ ದೇವರ ಕರುಣೆ, ಉತ್ತಮತ್ವ ಮತ್ತು ಅಧಿಕಾರವನ್ನು ನೆಬೂಕದ್ನೆಚ್ಚರನು ಮಾಡಿದ ಸ್ವೀಕಾರವು ಆತನ ಜೀವಿತದ ಕಡೆಯ ಕೃತ್ಯವಾಗಿ ಪವಿತ್ರ ಚರಿತ್ರೆಯಲ್ಲಿ ದಾಖಲಾಗಿದೆ– ಎಲೆನ್ ಜಿ ವೈಟಮ್ಮನವರ ಪ್ರಾಫೆಟ್ಸ್ ಅಂಡ್ ಕಿಂಗ್ಸ್, ಪುಸ್ತಕದಲ್ಲಿ 521ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಗರ್ವವು ಪ್ರತಿ ಇತರೆ ದುಷ್ಟತನಕ್ಕೆ ನಡೆಸುತ್ತದೆ; ಇದು ಪರಿಪೂರ್ಣವಾದ ದೈವವಿರೋಧಿಯಾದ ಮನಸ್ಥಿತಿಯಾಗಿದೆ. ಇದು ಉತ್ಪ್ರೇಕ್ಷೆ ಮಾಡಲಾಗಿರುವಂತೆ ತೋರುತ್ತದೆಯೇ? ಹಾಗಾದರೆ, ಚೆನ್ನಾಗಿ ಯೋಚಿಸಿರಿ ಹೆಚ್ಚಾಗಿ ಗರ್ವಪಡುವವನು ಇತರರ ಗರ್ವವನ್ನು ಹೆಚ್ಚಾಗಿ ದ್ವೇಷಿಸುತ್ತಾನೆ. ಸತ್ಯವಾಗಿ, ನೀವು ಎಷ್ಟು ಗರ್ವಪಡುತ್ತೀರಿ ಎಂಬುದನ್ನು ಅರಿಯುವುದಕ್ಕೆ ಒಂದು ಸುಲಭವಾದ ಮಾರ್ಗ ಯಾವುದೆಂದರೆ ನೀವು ನಿಮ್ಮನ್ನು "ಮತ್ತೊಬ್ಬರು ನನ್ನನ್ನು ಹತ್ತಿಕ್ಕುವಾಗ, ನನ್ನನ್ನು ಗಮನಿಸದೆ ಅಲಕ್ಷಿಸಿದಾಗ

ಇತರರು ನಮ್ಮ ವಿಷಯದಲ್ಲಿ ಮೂಗು ತೂರಿಸಿದಾಗ, ನನ್ನನ್ನು ಪೋಷಿಸಲು ಬಂದಾಗ ಅಥವಾ ಇತರರು ತಮ್ಮ ದೊಡ್ಡತನ ಪ್ರದರ್ಶಿಸುವಾಗ ಎಷ್ಟು ದ್ವೇಷಿಸುತ್ತೇನೆಂದು ಕೇಳಿಕೊಳ್ಳಿರಿ. ವಿಷಯವೇನೆಂದರೆ ಪ್ರತಿಯೊಬ್ಬರ ಗರ್ವವು ಮತ್ತೊಬ್ಬರ ಗರ್ವದೊಂದಿಗೆ ಸ್ಪರ್ಧೆಗಿಳಿಯುತ್ತದೆ. ಜನರ ಗುಂಪಿನಲ್ಲಿ ನನ್ನ ಸ್ವರವು ದೊಡ್ಡದಾಗಿರಬೇಕೆಂದು ಬಯಸುವಾಗ ಮತ್ತೊಬ್ಬರ ಸ್ವರವು ದೊಡ್ಡದಾಗಿರುವುದನ್ನು ಸಹಿಸದೆ ಬೇಸರಪಡುತ್ತೇವೆ. ಮತ್ತೊಬ್ಬರು ನಮ್ಮಂತೆ ಆಗುವುದನ್ನು ಎಂದಿಗೂ ಒಪ್ಪಿಕೊಳ್ಳುವುದಿಲ್ಲ. ಸಿ.ಎಸ್. ಲೆವಿಸ್ ಮೆರೆ ಕ್ರಿಸ್ತಿಯಾನಿಟಿ (ನ್ಯೂಯಾರ್ಕ್, ಟಚ್ ಸ್ಟೋನ್, 1996), ಪುಟ 110. ನಿಮ್ಮ ಸ್ವಂತ ಜೀವಿತದಲ್ಲಿ ಇರುವ ಗರ್ವವನ್ನು ನೋಡುವುದಕ್ಕೆ ಲೇವಿಸ್ಸರ ಮಾತು ಹೇಗೆ ಸಹಾಯ ಮಾಡುತ್ತದೆ?

2. ಈ ಅಧ್ಯಾಯದಲ್ಲಿಯೂ ಇದರ ಮುಂಚಿನ ಅಧ್ಯಾಯಗಳಲ್ಲಿಯೂ ಇರುವ ತಿರುಳಾವುದೆಂದರೆ "ದೇವರ ಸಾರ್ವಭೌಮತ್ವ" ಅರ್ಥಮಾಡಿಕೊಳ್ಳಲು ಇದು ಬಹಳ ಮುಖ್ಯವಾದ ವಿಷಯವಾಗಿದೆ ಏಕೆ? ಈ ನಿರ್ಣಾಯಕವಾದ ಸತ್ಯವನ್ನು ಅರ್ಥಮಾಡಿಕೊಳ್ಳುವಂತೆ ಸಹಾಯ ಮಾಡಲು ಸಬ್ಬತ್ತು ಯಾವ ಪಾತ್ರವನ್ನು ವಹಿಸುತ್ತದೆ?